ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ರೈ.ಸಂ.ಕೇ/16ನೇ ವಿ.ಸ./ಪ್ರ.ಸಂ.346/2024

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ:19.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ(ನಿಪ್ಪಾಣಿ), ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 346 ಕ್ಕೆ ಉತ್ತರ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ರವರ ಪತ್ರ ಸಂ: ಪ್ರಶಾವಿಸ/ 16ನೇವಿಸ/ 4ನೇಅ/ ಪ್ರ.ಸಂ.346/ 2024 ದಿನಾಂಕ: 09.07.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ~~ಶ್ರೀ/~~ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ(ನಿಪ್ಪಾಣಿ), ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 346 ಕ್ಕೆ ಉತ್ತರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಆದ್ಯ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	346
ಉತ್ತರಿಸಬೇಕಾದ ದಿನಾಂಕ	:	24.07.2024
ವಿಷಯ	:	ರೈತ ಸಂಪರ್ಕ ಕೇಂದ್ರ ಮಂಜೂರು
ಪ್ರಶ್ನೆ ಕೇಳಿದವರು	:	ಶ್ರೀ/ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ(ನಿಪ್ಪಾಣಿ), ಮಾನ್ಯ ವಿಧಾನ ಸಭೆ ಸದಸ್ಯರು
ಉತ್ತರಿಸಬೇಕಾದವರು:		ಮಾನ್ಯ ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆಯಲ್ಲಿರುವ ಒಟ್ಟು ರೈತ ಸಂಪರ್ಕ ಕೇಂದ್ರಗಳು ಎಷ್ಟು: (ವಿವರ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 35 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. (ತಾಲ್ಲೂಕುವಾರು ವಿವರ ಅನುಬಂಧ 1ರಲ್ಲಿ ಲಗತ್ತಿಸಿದೆ)
ಆ	ಪ್ರತಿ ತಾಲ್ಲೂಕಿಗೆ ಎಷ್ಟು ರೈತ ಸಂಪರ್ಕ ಕೇಂದ್ರಗಳನ್ನು ಮಂಜೂರು ಮಾಡಲಾಗುತ್ತಿದೆ.	ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99 ದಿ:29.06.2000 ರಂತೆ ರಾಜ್ಯದಲ್ಲಿನ ಪ್ರತಿ ಹೋಬಳಿಯಲ್ಲಿ ಹೋಬಳಿಗೊಂದರಂತೆ ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿರುತ್ತದೆ.
ಇ	ನಿಪ್ಪಾಣಿ ತಾಲ್ಲೂಕಿನಲ್ಲಿ ಒಂದೇ ಒಂದು ರೈತ ಸಂಪರ್ಕ ಕೇಂದ್ರ ಕಾರ್ಯನಿರ್ವಹಿಸುತ್ತಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕು ಮೊದಲು ಚಿಕ್ಕೋಡಿ ತಾಲ್ಲೂಕಿನ ಹೋಬಳಿ ಕೇಂದ್ರವಾಗಿತ್ತು. ಕಂದಾಯ ಇಲಾಖೆಯ ಆದೇಶದ ಸಂಖ್ಯೆ : RD 138BHUDAPU 2017 Dated : 08.02.2018 ರಂತೆ ನಿಪ್ಪಾಣಿ ತಾಲ್ಲೂಕು ಅಸ್ತಿತ್ವಕ್ಕೆ ಬಂದಿದ್ದು, ಇದು ಕರ್ನಾಟಕ ರಾಜ್ಯಪತ್ರ (ವಿಶೇಷ ರಾಜ್ಯ ಪತ್ರಿಕೆ) ದಲ್ಲಿ ದಿನಾಂಕ:08.02.2018 ರಲ್ಲಿ ಪ್ರಕಟವಾಗಿರುತ್ತದೆ. ಈ ಆದೇಶದ ಪ್ರಕಾರ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಹೋಬಳಿಯ ಕೆಲವು ಗ್ರಾಮಗಳನ್ನು ಹಾಗೂ ನಿಪ್ಪಾಣಿ ಹೋಬಳಿಯ ಎಲ್ಲಾ ಗ್ರಾಮಗಳನ್ನು ಒಳಗೊಂಡಂತೆ ನಿಪ್ಪಾಣಿ ಹೊಸ ತಾಲ್ಲೂಕು ಅನ್ನು ರಚಿಸಲಾಗಿರುತ್ತದೆ.

		ನಿಪ್ಪಾಣಿ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯಲ್ಲಿ ಒಂದು ರೈತ ಸಂಪರ್ಕ ಕೇಂದ್ರುವು ಕಾರ್ಯನಿರ್ವಹಿಸುತ್ತಿದೆ.
ಈ	ನಿಪ್ಪಾಣಿ ತಾಲ್ಲೂಕಿನ ಕೆಲ ಗ್ರಾಮಗಳನ್ನು ನೆರೆಯ ಚಿಕ್ಕೋಡಿ ತಾಲ್ಲೂಕಿನ ಸದಲಗಾ ರೈತ ಸಂಪರ್ಕ ಕೇಂದ್ರಕ್ಕೆ ಸೇರಿಸಿರುವುದರಿಂದ ನಿಪ್ಪಾಣ್ಣಿ ತಾಲ್ಲೂಕಿನ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಿಪ್ಪಾಣಿ ತಾಲೂಕಿನಲ್ಲಿ ಒಂದು ಹೋಬಳಿಯಿದ್ದು, ಒಂದು ರೈತ ಸಂಪರ್ಕ ಕೇಂದ್ರ ಸ್ಥಾಪಿಸಲಾಗಿದೆ. ಬಿತ್ತನೆ ಬೀಜ ವಿತರಣೆ ಸಂದರ್ಭದಲ್ಲಿ ರೈತರಿಗೆ ಅನುಕೂಲವಾಗಲು ಹೆಚ್ಚುವರಿ ಬೀಜ ವಿತರಣೆ ಕೇಂದ್ರಗಳನ್ನು ವಿತರಣಾ ಸಂದರ್ಭದಲ್ಲಿ ಸ್ಥಾಪಿಸಿ, ಬಿತ್ತನೆ ಬೀಜ ವಿತರಣೆ ಕಾರ್ಯ ಕೈಗೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ. 1. ಕಾಡಸಿದ್ದೇಶ್ವರ ಪಿ.ಕೆ.ಪಿ.ಎಸ್. ಬೆನಾಡಿ 2. ಸೌಂದಲಗಾ ಪಿ.ಕೆ.ಪಿ.ಎಸ್. 3.ಪಿ.ಕೆ.ಪಿ.ಎಸ್. ಕುರ್ಲಿ, ಮತ್ತಿವಾಡ, ಅಪ್ಪಾಚಿವಾಡಿ 4. ಪಿ.ಕೆ.ಪಿ.ಎಸ್. ಹಡನಾಳ, ಘಾಟನಾಗನೂರ 5. ಪಿ.ಕೆ.ಪಿ.ಎಸ್. ಬೂದಿಹಾಳ
ಉ	ನಿಪ್ಪಾಣಿ ಹೊಸ ತಾಲ್ಲೂಕಿಗೆ ಇನ್ನೊಂದು ರೈತ ಸಂಪರ್ಕ ಕೇಂದ್ರದ ಅವಶ್ಯಕತೆ ಇರುವುದರಿಂದ ಯಾವಾಗ ಮಂಜೂರು ಮಾಡಲಾಗುವುದು? (ಪ್ರಸ್ತಾವನೆಯು ಯಾವ ಹಂತದಲ್ಲಿದೆ ವಿವರ ನೀಡುವುದು)	ಹೊಸದಾಗಿ ರಚನೆಯಾಗಿರುವ ನಿಪ್ಪಾಣಿ ತಾಲ್ಲೂಕು ನಿಪ್ಪಾಣಿ ಹೋಬಳಿಯನ್ನು ಮಾತ್ರ ಒಳಗೊಂಡಿದ್ದು, ಸರ್ಕಾರಿ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99 ದಿ:29.06.2000 ರಂತೆ ರಾಜ್ಯದಲ್ಲಿನ ಪ್ರತಿ ಹೋಬಳಿಯಲ್ಲಿ ಹೋಬಳಿಗೊಂದರಂತೆ ರೈತ ಸಂಪರ್ಕ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು, ನಿಪ್ಪಾಣಿ ಹೋಬಳಿಯಲ್ಲಿ ರೈತ ಸಂಪರ್ಕ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿ ರೈತ ಸಂಪರ್ಕ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಕೃಷಿ ನಿರ್ದೇಶಕರು

ಅನುಬಂಧ-1				
ಕ್ರ.ಸಂ	ಜಿಲ್ಲೆ	ತಾಲ್ಲೂಕು	ಹೋಬಳಿ	ರೈತ ಸಂಪರ್ಕ ಇರುವ ಸ್ಥಳ
1	ಬೆಳಗಾವಿ	ಬೆಳಗಾವಿ	ಕಾಕತಿ	ಕಾಕತಿ
2			ಹಿರೇಬಾಗೇವಾಡಿ	ಹಿರೇಬಾಗೇವಾಡಿ
3			ಉಚಗಾಂವ್	ಉಚಗಾಂವ್
4			ಬೆಳಗಾವಿ	ಬೆಳಗಾವಿ
5		ಸೌಂದತ್ತಿ	ಸೌಂದತ್ತಿ	ಸೌಂದತ್ತಿ
6			ಮುನವಳ್ಳಿ	ಮುನವಳ್ಳಿ
7			ಯರಗಟ್ಟಿ	ಯರಗಟ್ಟಿ
8			ಮುರಗೋಡ್	ಮುರಗೋಡ್
9		ಗೋಕಾಕ್	ಅರಭಾವಿ	ಅರಭಾವಿ
10			ಕೌಜಲಗಿ	ಕೌಜಲಗಿ
11			ಗೋಕಾಕ್	ಗೋಕಾಕ್
12		ಬೈಲಹೊಂಗಲ	ಕಿತ್ತೂರು	ಕಿತ್ತೂರು
13			ಬೈಲಹೊಂಗಲ	ಬೈಲಹೊಂಗಲ
14			ನೇಸರಗಿ	ನೇಸರಗಿ
15		ಅಥಣಿ	ತೆಲ್ಸಂಗ	ತೆಲ್ಸಂಗ
16			ಕಾಗವಾಡ	ಕಾಗವಾಡ
17			ಅಥಣಿ	ಅಥಣಿ
18			ಅನಂತಪುರ	ಅನಂತಪುರ
19		ರಾಮದುರ್ಗ	ಕೆ. ಚಂದರಗಿ	ಕೆ. ಚಂದರಗಿ
20			ಕಟಕೋಳ	ಕಟಕೋಳ
21			ಮುದಕವಿ	ಮುದಕವಿ
22			ರಾಮದುರ್ಗ	ರಾಮದುರ್ಗ
23		ಹುಕ್ಕೇರಿ	ಸಂಕೇಶ್ವರ್	ಸಂಕೇಶ್ವರ್
24			ಹುಕ್ಕೇರಿ	ಹುಕ್ಕೇರಿ
25			ಯಮನಕಮರಡಿ	ಯಮನಕಮರಡಿ
26		ಚಿಕ್ಕೋಡಿ	ನಾಗರಮುನೋಳಿ	ನಾಗರಮುನೋಳಿ
27			ಚಿಕ್ಕೋಡಿ	ಚಿಕ್ಕೋಡಿ
28			ಸದಲಗ	ಸದಲಗ
29		ನಿಪ್ಪಾಣಿ	ನಿಪ್ಪಾಣಿ	ನಿಪ್ಪಾಣಿ
30		ಖಾನಾಪುರ	ಖಾನಾಪುರ	ಖಾನಾಪುರ
31			ಬೀಡಿ	ಬೀಡಿ
32			ಜಾಂಬೋಟಿ	ಜಾಂಬೋಟಿ
33			ಗುಂಜಿ	ಗುಂಜಿ
34		ರಾಯಬಾಗ	ರಾಯಬಾಗ	ರಾಯಬಾಗ
35			ಕುಡಚಿ	ಕುಡಚಿ
		ಒಟ್ಟು	**35**	**35**

ಜಂಟಿ ಕೃಷಿ ನಿರ್ದೇಶಕರು
ಬೆಳೆ ಅಭಿವೃದ್ಧಿ